**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ದಿನಾಂಕ 18 ನೇ ಮಾಹೆ ಮೇ 2023**

**ಸಿ.ಸಿ.2123/2022**

| | | |
|---|---|---|
| ಪಿರ್ಯಾದುದಾರರು | : | ರಾಜ್ಯದ ಪರ ಬೆಟ್ಟದಪುರ ಠಾಣಾ ಆರಕ್ಷಕರು<br>(ಸಹಾಯಕ ಸರ್ಕಾರಿ ಅಭಿಯೋಜಕರವರಿಂದ) |
| | ವಿರುದ್ಧ | |
| ಆರೋಪಿ | : | ಕುಮಾರ.ಸಿ ಬಿನ್ ಲೇಟ್. ಚಿಕ್ಕೇಗೌಡ,<br>ವಯಸ್ಸು 56 ವರ್ಷ,<br>ವಾಸಃ ಚಪ್ಪರದಳ್ಳಿ ಗ್ರಾಮ,<br>ಪಿರಿಯಾಪಟ್ಟಣ ತಾಲ್ಲೂಕು,<br>ಮೈಸೂರು ಜಿಲ್ಲೆ. |

**ದೋಷಾರೋಪಣೆ**

ಶ್ರೀಮತಿ.ಶ್ವೇತ.ಜೆ., *ಬಿ.ಕಾಂ., ಎಲ್‌ಎಲ್.ಬಿ,* ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಪಿರಿಯಾಪಟ್ಟಣ ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಅಂದರೆ, 1 ರಿಂದ 4 ನೇ ಆರೋಪಿಗಳ ವಿರುದ್ದ ಮಾಡುವ ದೋಷಾರೋಪಣೆ ಏನೆಂದರೆ,

ಮೊದಲನೇಯದಾಗಿ, 2009 ನೇ ಸಾಲಿನಲ್ಲಿ ಹಾರಂಗಿ ಏತ ನೀರಾವರಿ ಕಿರುಗಾಲುವೆಗೆ ಚಪ್ಪರದಳ್ಳಿ ಗ್ರಾಮದಲ್ಲಿರುವ ಸರ್ವೆ ಸಂಖ್ಯೆಃ 86/13 ಮತ್ತು 86/4 ರಲ್ಲಿನ ಚಾಸಾ.1 ಇಂದ್ರೇಶ್.ಸಿ, ಚಾಸಾ.3 ಜಯಮ್ಮ, ಚಾಸಾ.4 ಪದ್ಮ ಮತ್ತು ಚಾಸಾ.8 ಪಲ್ಲವಿರವರಿಗೆ ಸೇರಿದ ಜಮೀನುಗಳು ಭೂಸ್ವಾಧೀನವಾಗಿದ್ದು, ಆರೋಪಿತನಾದ ನೀವು ಚಾಸಾ.1, 3, 4 ಮತ್ತು 8 ರವರಿಗೆ ಸೇರಬೇಕಿದ್ದ ಭೂಸ್ವಾಧೀನದ ಪರಿಹಾರವನ್ನು ನೀವು ಪಡೆದುಕೊಂಡು ಚಾಸಾ.1, 3, 4 ಮತ್ತು 8 ರವರಿಗೆ ಮೋಸ ಮಾಡಿರುತ್ತೀರಿ, ಆ ಮೂಲಕ ಆರೋಪಿಯಾದ ನೀವು **ಭಾರತ ದಂಡ ಸಂಹಿತೆ ಕಲಂ.417 ರ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ

ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಎರಡನೇಯದಾಗಿ, ಮೇಲ್ಕಂಡ ಸಾಲಿನಲ್ಲಿ ಆರೋಪಿಯಾದ ನೀವು ಚಾಸಾ.1 ಇಂದ್ರೇಶ್.ಸಿ ರವರ ಅನುಭವದಲ್ಲಿರುವ ಜಮೀನಿಗೆ, ಹಾರಂಗಿ ಏತ ನೀರಾವರಿ ಕಿರುಗಾಲುವೆಗೆ ಭೂ ಸ್ವಾದೀನವಾಗಿರುವ 3 ಗುಂಟೆ ಜಮೀನಿಗೆ ಮಾತ್ರ ದಾಖಲಾತಿಗಳನ್ನು ಸಲ್ಲಿಸಿ, ನಾಲಾ ಪರಿಹಾರದ ಹಣವನ್ನು ಪಡೆಯುವ ಬದಲು, ಚಾಸಾ.1 ಇಂದ್ರೇಶ, ಚಾಸಾ.3 ಜಯಮ್ಮ ಚಾಸಾ.4 ಪದ್ಮ ಚಾಸಾ.8 ಪಲ್ಲವಿ ರವರ ಅನುಭವದಲ್ಲಿರುವ ಜಮೀನಿಗೆ, ಹಾರಂಗಿ ಏತ ನೀರಾವರಿ ಕಿರುಗಾಲುವೆಗೆ ಸಂದಾಯವಾಗುವ ಪರಿಹಾರದ ಹಣವನ್ನು ತಪ್ಪಿಸಲು, ಚಾಸಾ.1 ರಿಂದ 7 ರವರುಗಳಿಗೆ ವಂಚನೆ ಮಾಡಿ ಹಣವನ್ನು ಪಡೆದಿರುತ್ತೀರಿ, ಆ ಮೂಲಕ ಆರೋಪಿಯಾದ ನೀವು **ಭಾರತ ದಂಡ ಸಂಹಿತೆ ಕಲಂ.420 ರ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಮೂರನೇಯದಾಗಿ, ಮೇಲ್ಕಂಡ ಸಾಲಿನಲ್ಲಿ ಆರೋಪಿಯಾದ ನೀವು ಚಾಸಾ.1, ಚಾಸಾ.3, ಚಾಸಾ.4 ಮತ್ತು ಚಾಸಾ.8 ರವರುಗಳು ಭೂಸ್ವಾಧೀನಲ್ಲಿರುವ ಜಮೀನುಗಳಿಗೆ ಚಾಸಾ.1 ಮತ್ತು ಚಾಸಾ.8 ರವರಿಗೆ ನಾಲಾ ಪರಿಹಾರದ ಹಣವು ಸಂದಾಯವಾಗುವುದನ್ನು ಅಪ್ರಾಮಾಣಿಕವಾಗಿ ಮೋಸದಿಂದ ತಡೆದಿರುತ್ತೀರಿ, ಆ ಮೂಲಕ ಆರೋಪಿಯಾದ ನೀವು **ಭಾರತ ದಂಡ ಸಂಹಿತೆ ಕಲಂ.422 ರ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ನಾಲ್ಕನೇಯದಾಗಿ, ಮೇಲ್ಕಂಡ ಸಾಲಿನಲ್ಲಿ ಆರೋಪಿಯಾದ ನೀವು ಚಾಸಾ.1, ಚಾಸಾ.3, ಚಾಸಾ.4 ಮತ್ತು ಚಾಸಾ.8 ರವರುಗಳು ಭೂಸ್ವಾಧೀನಲ್ಲಿರುವ ಜಮೀನುಗಳಿಗೆ ಚಾಸಾ.1, 3 ಮತ್ತು ಚಾಸಾ.4 ರವರಿಗೆ ಸಂದಾಯವಾಗಬೇಕಿದ್ದ ನಾಲಾ ಪರಿಹಾರದ ಹಣವನ್ನು ವಂಚಿಸುವ ಉದ್ದೇಶದಿಂದ

ನೀವು ಪಡೆದುಕೊಂಡು ಕೇಡುಂಟು ಮಾಡಿರುತ್ತೀರಿ, ಆ ಮೂಲಕ ಆರೋಪಿಯಾದ ನೀವು **ಭಾರತ ದಂಡ ಸಂಹಿತೆ ಕಲಂ.426 ರ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಐದನೇಯದಾಗಿ, ಮೇಲ್ಕಂಡ ಸಾಲಿನಲ್ಲಿ ಆರೋಪಿಯಾದ ನೀವು ನಾಲಾ ಪರಿಹಾರದ ಹಣವನ್ನು ಪಡೆದುಕೊಂಡು ಚಾಸಾ.1, 3 ಮತ್ತು ಚಾಸಾ.4 ರವರುಗಳಿಗೆ ನಷ್ಟವುಂಟು ಮಾಡಿರುತ್ತೀರಿ, ಆ ಮೂಲಕ ಆರೋಪಿಯಾದ ನೀವು **ಭಾರತ ದಂಡ ಸಂಹಿತೆ ಕಲಂ.427 ರ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಆರನೇಯದಾಗಿ, ಮೇಲ್ಕಂಡ ಸಾಲಿನಲ್ಲಿ ಆರೋಪಿಯಾದ ನೀವು ಹಾರಂಗಿ ಏತನೀರಾವರಿ ಕಿರುಗಾಲುವೆಯ ನಾಲಾಪರಿಹಾರದ ಹಣವನ್ನು ಅಕ್ರಮವಾಗಿ ಪಡೆದುಕೊಳ್ಳಲು ಮೋಸದಿಂದ ದಾಖಲಾತಿಗಳಿಗೆ ಚಾಸಾ.1 ರಿಂದ 7 ರವರ ಸಹಿಗಳನ್ನು ನಕಲು ಮಾಡಿರುತ್ತೀರಿ, ಆ ಮೂಲಕ ಆರೋಪಿಯಾದ ನೀವು **ಭಾರತ ದಂಡ ಸಂಹಿತೆ ಕಲಂ.465 ಮತ್ತು 468 ರ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಕೊನೇಯದಾಗಿ, ಮೇಲ್ಕಂಡ ಸಾಲಿನಲ್ಲಿ ಆರೋಪಿಯಾದ ನೀವು ಹಾರಂಗಿ ಏತನೀರಾವರಿ ಕಿರುಗಾಲುವೆಯ ನಾಲಾಪರಿಹಾರದ ಹಣವನ್ನು ಪಡೆದುಕೊಳ್ಳಲು ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿಕೊಂಡು, ಸುಳ್ಳು ಸ್ವಷ್ಟನೇಯ ದಾಖಲಾತಿಗಳನ್ನು ನೈಜ ದಾಖಲಾತಿಗಳೆಂದು ಮೈಸೂರಿನ ವಿಶೇಷ ಭೂಸ್ವಾಧಿನಾಧಿಕಾರಿಗಳ ಕಚೇರಿಗೆ ಸಲ್ಲಿಸಿರುತ್ತೀರಿ, ಆ ಮೂಲಕ ಆರೋಪಿಯಾದ ನೀವು **ಭಾರತ ದಂಡ ಸಂಹಿತೆ ಕಲಂ.471 ರ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಈ ಮೇಲ್ಕಂಡ ದೋಷಾರೋಪಣೆಗೆ ನೀವು ವಿಚಾರಣೆಗೆ ಗುರುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿದ್ದೇನೆ.

**(ಶ್ರೀಮತಿ. ಶ್ವೇತ.ಜೆ)**
**ಹೆಚ್ಚುವರಿ ಸಿವಿಲ್ ನ್ಯಾಯಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿ,**
**ಪಿರಿಯಾಪಟ್ಟಣ.**